# ಕರ್ನಾಟಕ ವಿಧಾನ ಪರಿಷತ್ತು

<table>
<tr><td colspan="2">ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ</td><td>541 (681)</td></tr>
<tr><td colspan="2">ಸದಸ್ಯರ ಹೆಸರು</td><td>ಶ್ರೀ ಐವನ್ ಡಿ' ಸೋಜಾ(ವಿಧಾನ ಸಭೆಯಿಂದ ಚುನಾಯಿತರಾದವರು)</td></tr>
<tr><td colspan="2">ಉತ್ತರಿಸಬೇಕಾದ ದಿನಾಂಕ</td><td>22-07-2024</td></tr>
<tr><td colspan="2">ಉತ್ತರಿಸಬೇಕಾದ ಸಚಿವರು</td><td>ಉನ್ನತ ಶಿಕ್ಷಣ ಸಚಿವರು</td></tr>
<tr><td>ಕ್ರ. ಸಂ</td><td>ಪ್ರಶ್ನೆ</td><td>ಉತ್ತರ</td></tr>
<tr><td>ಅ)</td><td>2021ರಲ್ಲಿ ಸಹಾಯಕ ಪ್ರಾಧ್ಯಾಪಕರ ನೇಮಕಾತಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿದೆಯೇ; ನೀಡದಿದ್ದಲ್ಲಿ ಕಾರಣವೇನು; (ವಿವರ ನೀಡುವುದು)</td><td rowspan="4">2021ರ ಸಹಾಯಕ ಪ್ರಾಧ್ಯಾಪಕರ ನೇಮಕಾತಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಿರುವುದಿಲ್ಲ.<br><br>ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಅಂತಿಮ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾಗಿರುವ 1208 ಅಭ್ಯರ್ಥಿಗಳ ನೇಮಕಾತಿ ಅರ್ಹತೆಗೆ ಸಂಬಂಧಿಸಿದಂತೆ, ಸರ್ಕಾರದ ಪತ್ರಸಂಖ್ಯೆ: ಇಡಿ 92 ಡಿಸಿಇ 2023(ಇ), ದಿನಾಂಕ: 06.11.2023ರಲ್ಲಿ ನೀಡಿರುವ ನಿರ್ದೇಶನದನ್ವಯ ಅವರುಗಳ ವಿದ್ಯಾರ್ಹತೆ, ಮೀಸಲಾತಿ ಇನ್ನಿತರ ಅಗತ್ಯ ದಾಖಲೆಗಳ ಬಗ್ಗೆ ಸಕ್ಷಮ ಪ್ರಾಧಿಕಾರಗಳಿಂದ ನೈಜತೆ ವರದಿಗಳನ್ನು ಪಡೆಯಲು ಕ್ರಮವಹಿಸಲಾಗಿದೆ. ಅದರಂತೆ, ಅಗತ್ಯ ದಾಖಲಾತಿಗಳ ಪರಿಶೀಲನಾ ಪ್ರಕ್ರಿಯೆ ಪೂರ್ಣಗೊಂಡ ಒಟ್ಟು 1097 ಅರ್ಹ ಸಹಾಯಕ ಪ್ರಾಧ್ಯಾಪಕ ಅಭ್ಯರ್ಥಿಗಳ ವರದಿ ಸರ್ಕಾರದಲ್ಲಿ ಸ್ವೀಕೃತವಾಗಿರುತ್ತದೆ.<br><br>ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಸುತ್ತೋಲೆ ಸಂಖ್ಯೆ:ಸಿಆಸುಇ/03/ಹೈಕಕೋ/2019, ದಿನಾಂಕ:01.02.2023 ರಲ್ಲಿ ಕಲ್ಯಾಣ-ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿಗಳಿಗೆ ಮೀಸಲಿರಿಸಿರುವ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿಮಾಡುವಲ್ಲಿ ವಿವಿಧ ನೇಮಕಾತಿ ಪ್ರಾಧಿಕಾರಗಳು ಪಾಲಿಸಬೇಕಾದ ವಿಧಿ-ವಿಧಾನಗಳ ಬಗ್ಗೆ ತಿಳಿಸುತ್ತಾ, ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸದೇ ಇದ್ದಲ್ಲಿ ಅಂತಹ ನೇಮಕಾತಿ ಪ್ರಕ್ರಿಯೆಗಳಲ್ಲಿ ಮೆರಿಟ್ ಪಟ್ಟಿಯಿಂದ ಆಯ್ಕೆ ಪಟ್ಟಿ ತಯಾರಿಸುವಲ್ಲಿ ಸ್ಥಳೀಯ ಅಭ್ಯರ್ಥಿಗಳನ್ನು ಮೊದಲಿಗೆ ಮಿಕ್ಕುಳಿದ ವೃಂದದಲ್ಲಿ ಲಭ್ಯವಿರುವ ಹುದ್ದೆಗಳಿಗೆದುರಾಗಿ ಪರಿಗಣಿಸಿ ಆಯ್ಕೆಪಟ್ಟಿ ತಯಾರಿಸುವುದು. ನಂತರ ಸ್ಥಳೀಯ ವೃಂದಲ್ಲಿ ಲಭ್ಯವಿರುವ ಹುದ್ದೆಗಳಿಗೆ ಪರಿಗಣಿಸಿ ಆಯ್ಕೆ ಪಟ್ಟಿ ತಯಾರಿಸುವಂತೆ ಸೂಚಿಸಲಾಗಿರುತ್ತದೆ.<br><br>ಅದರಂತೆ, ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಸರ್ಕಾರದ ದಿನಾಂಕ: 01.02.2023 ರ ಸುತ್ತೋಲೆಯನ್ವಯ ಪರಿಷ್ಕೃತ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ದಿನಾಂಕ: 17.02.2023 ರಂದು ಪ್ರಕಟಿಸಿ, ತದನಂತರ ದಿನಾಂಕ:03.03.2023 ರಂದು 1208 ಅಭ್ಯರ್ಥಿಗಳ ಅಂತಿಮ ಆಯ್ಕೆಪಟ್ಟಿಯನ್ನುಪ್ರಕಟಿಸಿರುತ್ತದೆ.<br><br>ಈ ಅಂತಿಮ ಆಯ್ಕೆ ಪಟ್ಟಿಯಿಂದ ಬಾಧಿತರಾದ ಅಭ್ಯರ್ಥಿಗಳು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಮೊರೆ ಹೋಗಿದ್ದು, ಮಾನ್ಯ ಆಡಳಿತ ನ್ಯಾಯ</td></tr>
<tr><td>ಆ)</td><td>ಇದೇ ಸಂದರ್ಭದಲ್ಲಿ ಆಯ್ಕೆಯಾದ ಕೆಪಿಟಿಸಿಎಲ್, ಪಿಡಬ್ಲ್ಯೂಡಿ ಇಲಾಖೆ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿದ್ದು, ಪ್ರಾಧ್ಯಾಪಕರಿಗೆ ಮಾತ್ರ ನೀಡದಿರುವುದು ಸರಿಯೇ; (ವಿವರ ನೀಡುವುದು)</td></tr>
<tr><td>ಇ)</td><td>1208 ಪ್ರಾಧ್ಯಾಪಕರ ಅಭ್ಯರ್ಥಿಗಳಿಗೆ ನ್ಯಾಯವನ್ನು ಒದಗಿಸಲು ಸರ್ಕಾರ ಕೈಗೊಂಡ ಕ್ರಮವೇನು;</td></tr>
<tr><td>ಈ)</td><td>2021 ರಿಂದ ಉದ್ಯೋಗ ವಿಲ್ಲದೆ ಅವರ ಜೀವನ ಕ್ರಮದಲ್ಲಿ ಉಂಟಾದ ತೊಂದರೆಗಳ ಬಗ್ಗೆ ಸರ್ಕಾರ ಗಮನ ಹರಿಸಲಾಗಿದೆಯೇ? (ವಿವರ ನೀಡುವುದು)</td></tr>
</table>

| | | |
|---|---|---|
| | | ಮಂಡಳಿಯು ದಿನಾಂಕ: 22.09.2023ರಂದು ನೀಡಿದ ತೀರ್ಪಿನಲ್ಲಿ ಅರ್ಜಿದಾರರ ಕೋರಿಕೆಯನ್ನು ತಿರಸ್ಕರಿಸಿ ಅರ್ಜಿಗಳನ್ನು ವಜಾಗೊಳಿಸಿರುತ್ತದೆ.<br>ಸದರಿ ತೀರ್ಪನ್ನು ಪ್ರಶ್ನಿಸಿ, ಮಾನ್ಯ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದ WP No.1464/2024 ಹಾಗೂ ಇಂತಹುದೇ ಸಮನಾಂತರ ಪ್ರಕರಣಗಳಾದ WP No. 28614/2023, 3455/2024, 1633/2024, 2034/2024, 1900/2024, ಪ್ರಕರಣಗಳನ್ನು ಒಟ್ಟುಗೂಡಿಸಿ ದಿನಾಂಕ: 13/03/2024ರಂದು ವಿಚಾರಣೆ ನಡೆಸಿದ ಸಂದರ್ಭದಲ್ಲಿ ಮಾನ್ಯ ರಾಜ್ಯ ಉಚ್ಚನ್ಯಾಯಾಲಯವು ಈ ಕೆಳಕಂಡಂತೆ ಮಧ್ಯಂತರ ಆದೇಶ ನೀಡಿರುತ್ತದೆ.<br>"Accordingly, the impugned order rendered by the KSAT in Application No.1512-1516/2023 vide Annexure-"B" is stayed. Further, the final selection list dated 03.03.2023 to the post of Assistant Professors vide Annexure-"A9" series is hereby stayed and the interim order of stay is confined to the petitioners only. It is clarified that the respondent / Authority shall not fill up the posts from which the petitioners have been displaced. However, the stay granted in this petition is subject to the result of this petition.<br>...... It is clarified that the state shall proceed with the counseling. However, the said counseling process shall be subject to the result of these petitions."<br>ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಆಯ್ಕೆ ಹೊಂದಿದ ಅಭ್ಯರ್ಥಿಗಳಿಗೆ ನೇಮಕಾತಿ ಪ್ರಾಧಿಕಾರವಾದ ಸರ್ಕಾರವು ನೇಮಕಾತಿ ಆದೇಶ ಹೊರಡಿಸಿದ ನಂತರ ಅವರುಗಳಿಗೆ ಇಲಾಖೆಯ ವರ್ಗಾವಣೆ ನಿಯಮಗಳು, 2021 ರ ನಿಯಮ 9(2) ರನ್ವಯ ಕೌನ್ಸಿಲಿಂಗ್ ಪ್ರಕ್ರಿಯೆ ನಡೆಸಿ, ಸ್ಥಳ ನಿಯುಕ್ತಿಗೊಳಿಸಬೇಕಾಗಿರುತ್ತದೆ. ಆದರೆ, ದಿನಾಂಕ:16.03.2024 ರಂದು ಲೋಕಸಭಾ ಚುನಾವಣೆ ಘೋಷಣೆಯ ಪ್ರಯುಕ್ತ ಚುನಾವಣಾ ನೀತಿಸಂಹಿತೆ ಜಾರಿಗೆ ಬಂದಿದ್ದರಿಂದ ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ನಡೆಸಲು ಸಾಧ್ಯವಾಗಿರುವುದಿಲ್ಲ.<br>ಮುಂದುವರೆದು, ಮಾನ್ಯ ಉಚ್ಚನ್ಯಾಯಾಲಯವು ಮೇಲಿನ ಎಲ್ಲಾ ಪ್ರಕರಣಗಳನ್ನು WA1218/2023 ಪ್ರಕರಣದೊಂದಿಗೆ ಜೋಡಿಸಲಾಗಿದ್ದು, ಈ ಪ್ರಕರಣಗಳಲ್ಲಿ ಮಾನ್ಯ ನ್ಯಾಯಾಲಯವು ನೀಡುವ ತೀರ್ಪಿನನ್ವಯ ಕ್ರಮವಹಿಸಲಾಗುವುದು. |

**ಇಡಿ 194 ಡಿಸಿಇ 2024 (ಇ)**

**(ಡಾ: ಎಂ.ಸಿ. ಸುಧಾಕರ್)**
ಉನ್ನತ ಶಿಕ್ಷಣ ಸಚಿವರು